

# ‘ಯಾವ ಪಂಥಕ್ಕೂ ಸೇರಿದವನಲ್ಲ, ನಾನು ಪಥಿಕ, ರಾಷ್ಟ್ರಪಥಿಕ...

**ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ. ವಸಂತಕುಮಾರ್ ಸಂದರ್ಶನ**

**ನಾಡು–ನುಡಿಯ ಅಭಿವೃದ್ಧಿಗಾಗಿ ದುಡಿಯುವ ಸಂಸ್ಥೆಗಳು ರಾಜಕಾರಣದ ಲೆಕ್ಕಾಚಾರಗಳನ್ನು ಮೀರಿ ಕಾರ್ಯ ನಿರ್ವಹಿಸಬೇಕು. ಇತ್ತೀಚಿನ ದಿನಗಳಲ್ಲಿ ಈ ಸಾಂಸ್ಕೃತಿಕ ಸಂಸ್ಥೆಗಳಿಗೂ ರಾಜಕೀಯದ ಸೋಂಕು ತಗುಲಿರುವಂತಿದೆ. ಈ ಹಿನ್ನೆಲೆಯಲ್ಲಿ ‘ಕರ್ನಾಟಕ ಸಾಹಿತ್ಯ ಅಕಾಡೆಮಿ’ ಅಧ್ಯಕ್ಷರಾದ ಬಿ.ವಿ. ವಸಂತಕುಮಾರ್ ಅವರನ್ನು ‘ಸುಧಾ’ ಮಾತನಾಡಿಸಿದೆ. ಅಕಾಡೆಮಿಯ ಇತ್ತೀಚಿನ ಚಟುವಟಿಕೆಗಳು, ಯೋಜನೆಗಳ ಜೊತೆಗೆ ವಸಂತಕುಮಾರ್ ಅವರ ವೈಯಕ್ತಿಕ ಒಲವು ನಿಲುವುಗಳ ಪರಿಚಯ ಈ ಸಂದರ್ಶನದಲ್ಲಿದೆ.**

■ **ರಾಘವೇಂದ್ರ ಕೆ. ತೊಗರ್ಸಿ**
ಚಿತ್ರ: ಅನೂಪ್ ರಾಘ್ ಟಿ.

◆ **ಕರ್ನಾಟಕ ಸಾಹಿತ್ಯ ಅಕಾಡೆಮಿ ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಹೆಚ್ಚು ಸಕ್ರಿಯವಾಗಿ ಇರುವಂತಿದೆ. ಈ ಬದಲಾವಣೆ ಏಕೆ?**

ಕೊರೊನಾ ಸಂಕಟ ಅಂತಹ ಅನಿವಾರ್ಯತೆಯನ್ನು ಸೃಷ್ಟಿಸಿತು. ಜನರ ಹತ್ತಿರ ಅಕಾಡೆಮಿ ಹೋಗಲು ಸಾಧ್ಯವಿಲ್ಲದ ಕಾರಣಕ್ಕೆ ಅಂತರ್ಜಾಲವನ್ನು ಹೆಚ್ಚು ಆಶ್ರಯಿಸಿದೆವು. ಕಳೆದ ಜೂನ್ 22ರಂದು ಮೊದಲ ಬಾರಿಗೆ ‘ಹೊಸ ಹಾದಿ ಹೊಸ ಹೆಜ್ಜೆ’ ಇ–ಉಪನ್ಯಾಸವನ್ನು ಚಂದ್ರಶೇಖರ ನಂಗಲಿ ಅವರ ಮೂಲಕ ಆರಂಭಿಸಿದೆವು. ಇವತ್ತಿನ ಸ್ಥಿತಿಗತಿಗಳಿಗೆ ನಾವೇ ಕಾರಣ. ಅದನ್ನು ಬದಲಿಸಲು ನಮಗೆ ಸಾಹಿತ್ಯ–ಸಂಸ್ಕೃತಿ ನೆರವಾಗಬೇಕು. ಅದನ್ನು ತಿಳಿಸಲು ಅಂತರ್ಜಾಲ ಮಾಧ್ಯಮ ಬಳಸಿದೆವು. ಬಾಬು ಕೃಷ್ಣಮೂರ್ತಿ, ಮಲ್ಲೇಪುರಂ ಜಿ. ವೆಂಕಟೇಶ್, ಹಂಪನಾ ಸೇರಿದಂತೆ ಆರು ಮಂದಿ ಉಪನ್ಯಾಸ ನೀಡಿದರು. ಇದು ಅಕಾಡೆಮಿಗೂ ವಿಶ್ವಾಸವನ್ನು ತುಂಬಿತು. ನವೆಂಬರ್ ತಿಂಗಳಲ್ಲಿ 30 ಕಾರ್ಯಕ್ರಮಗಳನ್ನು ಆಯೋಜಿಸಿದೆವು. ಪಂಪನ ‘ಆದಿಪುರಾಣ’ದಿಂದ ಕುವೆಂಪು ಅವರ ‘ರಾಮಾಯಣ ದರ್ಶನಂ’ವರೆಗೆ 30 ಕಾವ್ಯಗಳ ಬಗ್ಗೆ ಉಪನ್ಯಾಸ ಮಾಡಲಾಯಿತು. ಮುಂದಿನ ನವೆಂಬರ್ ತನಕ ಪ್ರತಿ ತಿಂಗಳು ನಿಯಮಿತವಾಗಿ ಇಂತಹ ಕಾರ್ಯಕ್ರಮಗಳನ್ನು ಮಾಡುತ್ತೇವೆ. ಅದರ ಭಾಗವಾಗಿಯೇ ಈ ವರ್ಷದ ಆರಂಭಕ್ಕೆ ‘ಜನಪದ ಕಾವ್ಯ ಸಪ್ತಾಹ’ ಮಾಡಿದ್ದೇವೆ.

◆ **ಹಾಡಿ–ಹಳ್ಳಿಗಳತ್ತ ಅಕಾಡೆಮಿ ಮುಖ ಮಾಡಿದಂತಿದೆ.**

ಅಕಾಡೆಮಿ ಪ್ರಾರಂಭವಾಗಿರುವುದೇ ಸ್ಥಾವರರೂಪಿ ಬದುಕನ್ನು ಜಂಗಮಗೊಳಿಸುವ ಪರಿಕಲ್ಪನೆಯಿಂದ. ಮೊದಲಿನಿಂದಲೂ ನಗರಗಳಿಂದ ಗ್ರಾಮಗಳವರೆಗೆ ಅಕಾಡೆಮಿ ತನ್ನ ಕಾರ್ಯಕ್ರಮಗಳನ್ನು ತೆಗೆದುಕೊಂಡು ಹೋಗಿದೆ. ಕೆ.ಎಸ್. ನಿಸಾರ್ ಅಹಮದ್ ಅವರ ಅವಧಿಯಲ್ಲಿ ಅಂತಹ ಸಾಕಷ್ಟು ಕೆಲಸಗಳು ಆಗಿವೆ. ಹಿರಿಯರು ಹಾಕಿಕೊಟ್ಟ ಪರಂಪರೆಯನ್ನು ವಿಸ್ತರಿಸುವ ಮತ್ತು ಬಲಗೊಳಿಸುವ ನಿಟ್ಟಿನಲ್ಲಿ ನಾನು ಕೆಲಸ ಮಾಡುತ್ತಿದ್ದೇನೆ.

◆ **ಪುಸ್ತಕ ಪ್ರಕಟಣೆಗೆ ಸಂಬಂಧಿಸಿದಂತೆ ನಿಮ್ಮ ಯೋಜನೆಗಳು ಏನು?**

ಜ್ಞಾನಸಂಪತ್ತಿನ ವಿಶ್ಲೇಷಣೆ ಮತ್ತು ಹೆಚ್ಚು ಗಮನ ನೀಡದ ಕ್ಷೇತ್ರಗಳತ್ತ ಬೆಳಕು ನೀಡುವಂತಹ ಪ್ರಕಟಣೆಗೆ ಒತ್ತು ನೀಡುತ್ತಿದ್ದೇವೆ. ಈ ಸಂಬಂಧ ‘ದೇಸಿ ದರ್ಶನ ಮಾಲೆ’ ಯೋಜನೆ ರೂಪುಗೊಂಡಿದೆ. ಭಾರತೀಯ ತತ್ವಜ್ಞಾನ ಮತ್ತು ಜೀವನ ದರ್ಶನದ ಹಿನ್ನೆಲೆಯಲ್ಲಿ ಸಾಹಿತ್ಯ ವಿಮರ್ಶೆಯನ್ನು ನೋಡುವ ಅಗತ್ಯ ಇದೆ. ಈ ಹಿನ್ನೆಲೆಯಲ್ಲಿ ದೇಸಿ ದರ್ಶನ ಮಾಲಿಕೆ ರೂಪಿತವಾಗುತ್ತಿದೆ. ಮಲ್ಲೇಪುರ ವೆಂಕಟೇಶ್ ಸಂಪಾದಕತ್ವದಲ್ಲಿ 16 ಪುಸ್ತಕಗಳು ಸಿದ್ಧವಾಗುತ್ತಿವೆ.

‘ಪಾರಿಭಾಷಿಕ ಪದ ಕೋಶ’ ಮಾಡುವ ಯೋಚನೆ ಇತ್ತು. ಅದನ್ನು ‘ಲೌಕಿಕ ಪದವಿವರಣ ಕೋಶ’ ಎಂದು ಮಾಡುತ್ತಿದ್ದೇವೆ. ಶಾಸ್ತ್ರಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ನಿಘಂಟು ಇಲ್ಲ.